ಅತಿಕ್ರಮಣ ಮಾಡಿದ ಜಮೀನಿನ ಕುರಿತು.

೯೫(೧೧೨) ಶ್ರೀ ಗೋಪಾಲ ಪಂಡಿತ್ ಕಾನಡೆ (ಖಿರ್ಸಿ)—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆ, ಶಿರಸಿ ಸಿದ್ದಾಪುರ ತಾಲ್ಲೂಕಿನ ಅರಣ್ಯ ಜಮೀನಿನಲ್ಲಿ ಕಳೆದ ೦ ವರ್ಷಗಳಿಂದ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡವರು ಹಾಗೂ ಜಮೀನು ಸಾಗುವಳಿ ಮಾಡುತ್ತಿರುವವರಿಗೆ ಜಮೀನನ್ನು ಸಕ್ರಮಗೊಳಿಸಲಾಗುವುದೆಂದು ಸದನದಲ್ಲಿ ನೀಡಿದ ಭರವಸೆಯನ್ನು ಸರ್ಕಾರ ಈವರೆಗೆ ಈಡೇರಿಸದೆ ಇರುವುದಕ್ಕೆ ಕಾರಣವೇನು ?

ಶ್ರೀ ಜೆ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು) —

ಅ) ದಿನಾಂಕ ೨೭-೪-೧೯೭೮ರ ಪೂರ್ವದಲ್ಲಾದ ಎಲ್ಲಾ ಅತಿಕ್ರಮ ಸಾಗುವಳಿಗಳನ್ನು ಸಕ್ರಮಗೊಳಿಸಬೇಕೆಂದು ಇದರನ್ವಯ ಸರ್ಕಾರ ಆದೇಶ ಸಂಖ್ಯೆ ಎಫ್ ಎಫ್ ಡಿ ೨೩೧ ಎಫ್ ಜಿ ಎಲ್ ೮೩ ದಿನಾಂಕ ೭-೩-೮೭ರಲ್ಲಿ, ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗುತ್ತಿದ್ದು, ಈ ಸಮಿತಿಯಿಂದ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ ಸಲ್ಲಿಸುವ ವರದಿಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಗಾಗಿ ಕಳಿಸಿ ಕೊಡಲಾಗುವುದು. ಕೇಂದ್ರ ಸರ್ಕಾರದ ಪೂರ್ವಾನುಮತಿ ದೊರೆತ ಮೇಲೆ ಕ್ರಮ ತೆಗೆದು ಕೊಳ್ಳಲಾಗುವುದು.

ನೀರಾವರಿ ಪಂಪುಸೆಟ್ಟುಗಳಿಗೆ ಬಳಸುವ ವಿದ್ಯುತ್

೫೩೭. ಶ್ರೀ ಜಿ ರಾಜುಗೌಡ (ಹನೂರು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೩೧-೧೨-೮೭ರ ವರೆಗೆ ಎಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ;

ಆ) ರಾಜ್ಯದ ಉತ್ಪಾದನೆಯ ಶೇಕಡಾ ಎಷ್ಟರ ಪ್ರಮಾಣವನ್ನು ನೀರಾವರಿ ಪಂಪುಸೆಟ್ಟುಗಳಿಗಾಗಿ ಬಳಸಲಾಗುತ್ತಿದೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೩೧-೧೨-೮೭ರ ವೇಳೆಗೆ ೫,೭೦,೨೯೯ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಆ) ನೀರಾವರಿ ಪಂಪುಸೆಟ್ಟುಗಳಿಗೆ ೧೯೮೬-೮೭ನೇ ಸಾಲಿನ ಆಂತರಿಕ ಉತ್ಪಾದನೆಯಿಂದ ಲಭ್ಯವಾದ ವಿದ್ಯುತ್ತಿನ ಸುಮಾರು ಶೇಕಡಾ ೧೯.೫೨ ರಷ್ಟು ವಿದ್ಯುತ್ತನ್ನು ಒದಗಿಸಲಾಯಿತು.

ರಬಕವಿ-ಬನಹಟ್ಟಿ ಅರಣ್ಯ ನಿವೇಶನಗಳು

೧೨೪. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ) —ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಜಮಖಂಡಿ ತಾಲ್ಲೂಕಿನ ರಬಕವಿ ಬನಹಟ್ಟಿ ವಾಪ್ತಿಯಲ್ಲಿನ ಅರಣ್ಯ ಪ್ರದೇಶ ನಿವೇಶನಗಳಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು;

ಆ) ಇಲ್ಲಿ ವಾಸ್ತವ್ಯ ಮಾಡಿಕೊಂಡಿರುವ ನೇಕಾರರ ಕುಟುಂಬಗಳಿಗೆ ನಿವೇಶನ ಕ್ರಮಬದ್ಧಗೊಳಿಸಲಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ನಿವೇಶನಗಳನ್ನು ಕ್ರಮಬದ್ಧ ಮಾಡುವಲ್ಲಿ ಸರ್ಕಾರಕ್ಕಿರುವ ಅಡಚಣೆಗಳೇನು ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸುಮಾರು ೪೦೦ ಕುಟುಂಬಗಳು.

ಆ) ಕ್ರಮಬದ್ಧಗೊಳಿಸಿಲ್ಲ.

ಇ) ಕ್ರಮಬದ್ಧಗೊಳಿಸಲು, ಅರಣ್ಯ ಸಂರಕ್ಷಣಾ ಕಾಯಿದೆ, ೧೯೮೦ರ ಅನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಕೇಂದ್ರ ಸರ್ಕಾರದ ಅನುಮತಿ ಪಡೆದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಬನಹಟ್ಟಿಯಲ್ಲಿ ನೂಲಿನ ಅಭಾವ

೧೯೪. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ) —ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ತೀವ್ರ ಕೈಮಗ್ಗ ಅಭಿವೃದ್ಧಿ ಕೇಂದ್ರ ಕೆಲಸ ಮಾಡುತ್ತಿದೆಯೇ ?

ಆ) ಈ ಕೇಂದ್ರಕ್ಕೆ ಪ್ರತಿ ತಿಂಗಳು ನಿಗದಿಯಾಗಿರುವ ನೂಲಿನ ಪ್ರಮಾಣವೆಷ್ಟು ?

ಇ) ಈ ಕೇಂದ್ರದ ಅಧೀನದಲ್ಲಿರುವ ಇತರ ಕೈಮಗ್ಗಗಳ ಸಂಖ್ಯೆ ಎಷ್ಟು ?

ಈ) ಕಳೆದ ಅನೇಕ ತಿಂಗಳುಗಳಿಂದ ಅಲ್ಲಿ ನೂಲಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ನೂಲಿನ ಅಭಾವ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ.ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)—

ಅ) ಮಾಡುತ್ತಿದೆ.

ಆ) ೮೫ ೮೦೦ ಕೆ.ಜಿ.ಗಳು.

ಇ) ೯,೪೫೧ ಕೈಮಗ್ಗಗಳು.

ಈ) ಬಂದಿದೆ.

ಉ) ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ, ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ಹಾಗೂ ಸಹಕಾರಿ ಗಿರಣಿಗಳಿಂದ ನೂಲನ್ನು ಖರೀದಿಸಿ ನೇಕಾರರಿಗೆ ಸರಬರಾಜು ಮಾಡಲಾಗುತ್ತಿದೆ.

ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯ ಕುರಿತು.

೩೨೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಭಾರಿ ಕೈಗಾರಿಕೆ ಮಂತ್ರಿ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಕ್ರೋಂ ಟ್ಯಾನಿಂಗ್ ಕಂಪೆನಿಯಲ್ಲಿ ಸರ್ಕಾರ ಸಹಭಾಗಿತ್ವ ಹೊಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರ ಇದರಲ್ಲಿ ತೊಡಗಿಸಿರುವ ಬಂಡವಾಳ ಎಷ್ಟು ?

ಇ) ಈ ಕಂಪನಿಯ ಮೂಲಧನ ಎಷ್ಟು ? ಈಗ ಹಾಲಿ ಇರುವ ಬಂಡವಾಳವೆಷ್ಟು ?

ಈ) ಈ ಕಂಪನಿ ಎಷ್ಟು ಎಕರೆ ಜಮೀನನ್ನು ಹೊಂದಿದೆ ?

ಉ) ಈ ಕಂಪನಿಯಲ್ಲಿ ದುಡಿಯುವ ನೌಕರರು ಎಷ್ಟು ಹಾಗೂ ಅವರಿಗೆ ಸರಿಯಾಗಿ ವೇತನ ವನ್ನು ನೀಡಲಾಗುತ್ತಿದೆಯೇ?